RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**



| ಭಾಗ- IV-A | ಬೆಂಗಳೂರು, ಶುಕ್ರವಾರ, ಜನವರಿ ೦೮, ೨೦೧೬ (ಪುಷ್ಯ ೧೮, ಶಕ ವರ್ಷ ೧೯೩೭) | ನಂ. ೩೩ |
|---|---|---|
| Part- IV-A | Bengaluru, Friday, January 08, 2016 (Pushya 18, Shaka Varsha 1937) | No. 33 |



**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಗ್ರಾಅಪ 146 ಜಿಪಸ 2015, ಬೆಂಗಳೂರು, ದಿನಾಂಕ: 8-1-2016**

**ಕರ್ನಾಟಕ ಪಂಚಾಯತ್.ರಾಜ್(ಚುನಾವಣೆ ನಡೆಸುವ) ತಿದ್ದುಪಡಿ ನಿಯಮಗಳು, 2016**

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ (ಕರ್ನಾಟಕ 1993ರ ಅಧಿನಿಯಮ ಸಂಖ್ಯೆ 14)ರ 311ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರನಾಟಕ ಸರ್ಕಾರವು, ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆಯನ್ನು ನಡೆಸುವ)(ತಿದ್ದುಪಡಿ) ನಿಯಮಗಳು 2015ನ್ನು ಪ್ರಸ್ತಾಪಿಸಿ ಕರಡು ಅಧಿಸೂಚನೆ ಸಂಖ್ಯೆ: ಗ್ರಾಅಪ: 146 :ಜಿಪಸ :2015, ದಿನಾಂಕ:25-11-2015 ರಂದು ಕರ್ನಾಟಕ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿದ್ದು, ಆ ಮೂಲಕ ಬಾಧಿತರಾಗುವ ಸಂಭವವಿರುವ ವ್ಯಕ್ತಿಗಳಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ;

ಮತ್ತು ದಿನಾಂಕ:25-11-2015 ರ ವಿಶೇಷ ರಾಜ್ಯ ಪತ್ರವನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಸದರಿ ಕರಡು ನಿಯಮದ ಬಗ್ಗೆ ರಾಜ್ಯ ಸರ್ಕಾರಕ್ಕೆ ಯಾವುದೇ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗಿರುವುದಿಲ್ಲ.

ಈಗ 1993ರ ಕರ್ನಾಟಕ ಪಂಚಾಯತ್ ರಾಜ್ (ಅಧಿನಿಯಮ ಸಂಖ್ಯೆ 14) 311 ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡಂತೆ ನಿಯಮಗಳನ್ನು ರಚಿಸುತ್ತದೆ.

<u>ನಿಯಮಗಳು</u>

1. **ಹೆಸರು ಮತ್ತು ಪ್ರಾರಂಭ:-** (1) ಈ ನಿಯಮಗಳನ್ನು **ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆಯನ್ನು ನಡೆಸುವ) (ತಿದ್ದುಪಡಿ) ನಿಯಮಗಳು, 2016** ಎಂದು ಕರೆಯತಕ್ಕದ್ದು.

   (2) ಅವು ಸರ್ಕಾರದ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.
2. **21ನೇ ನಿಯಮದ ತಿದ್ದುಪಡಿ:-** ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆ ನಡೆಸುವ) ನಿಯಮಗಳು 1993 (ಈ ಮುಂದೆ ಮೂಲ ನಿಯಮಗಳೆಂದು ಉಲ್ಲೇಖಿಸಲಾಗಿದೆ) 21ನೇ ನಿಯಮದಲ್ಲಿ ಖಂಡ (ಸಿ)ಯ ತರುವಾಯ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

   "(ಡಿ) ಬೇರೆ ರಾಜ್ಯದಲ್ಲಿ ಅಥವಾ ಬೇರೆ ರಾಜ್ಯಗಳಲ್ಲಿ ನೊಂದಾಯಿತ/ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಚಿಹ್ನೆಗಳ ಪಟ್ಟಿ;"
3. **22ನೇ ನಿಯಮದ ತಿದ್ದುಪಡಿ:-** ಮೂಲ ನಿಯಮಗಳ 22ನೇ ನಿಯಮದಲ್ಲಿನ, ಉಪ ನಿಯಮ(5)ರ "ವಿವರಣೆಯ" ತರುವಾಯ, ಈ ಮುಂದಿನ ಉಪ ನಿಯಮವನ್ನು ಸೇರಿಸತಕ್ಕದ್ದು, ಎಂದರೆ:-

   (6) ಒಂದು ರಾಜಕೀಯ ಪಕ್ಷವು ಬೇರೆ ರಾಜ್ಯದಲ್ಲಿ ಅಥವಾ ಬೇರೆ ರಾಜ್ಯಗಳಲ್ಲಿ ನೊಂದಾಯಿತ /ಮಾನ್ಯತೆ ಪಡೆದ ಪಕ್ಷವಾಗಿದ್ದು, ಕರ್ನಾಟಕ ರಾಜ್ಯದಲ್ಲಿ ಅದು ನೋಂದಾಯಿತ/ ಮಾನ್ಯತೆ ಪಡೆಯದ ರಾಜಕೀಯ ಪಕ್ಷವಾಗಿದ್ದರೆ ಅಂತಹ ಪಕ್ಷವು ಕರ್ನಾಟಕ ರಾಜ್ಯದಲ್ಲಿ ಚುನಾವಣೆಗೆ ಅಭ್ಯರ್ಥಿಗಳನ್ನು ನಿಲ್ಲಿಸಿದಲ್ಲಿ, ಆ ಪಕ್ಷದ/ಪಕ್ಷಗಳ ಅಭ್ಯರ್ಥಿಗಳಿಗೆ ಇತರೆ ರಾಜ್ಯ/ರಾಜ್ಯಗಳಲ್ಲಿ ನೀಡಿರುವ ಚಿಹ್ನೆಯನ್ನೇ, ಅಂತಹ ಚಿಹ್ನೆಯ ಮುಕ್ತ ಚಿಹ್ನೆಗಳ ಪಟ್ಟಿಯಲ್ಲಿ ಇಲ್ಲದಿದ್ದರೂ ಸಹ, ಈ ಕೆಳಗಿನ ಷರತ್ತುಗಳನ್ನು ಪೂರೈಸಿದಲ್ಲಿ, ನೀಡಬಹುದು. ಅಂದರೆ:-

   (ಅ) ಅಂತಹ ಪಕ್ಷಗಳ ರಾಜ್ಯಾಧ್ಯಕ್ಷರು, ರಾಜ್ಯ ಚುನಾವಣಾ ಆಯೋಗವು, ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿದ 3(ಮೂರು)ದಿನಗಳೊಳಗೆ ತಮ್ಮ ಪಕ್ಷದಿಂದ ಚುನಾವಣೆಗೆ ನಿಲ್ಲುವ ಅಭ್ಯರ್ಥಿಗಳಿಗೆ ಇಂತಹುದೇ ಚಿಹ್ನೆಯನ್ನೇ ನೀಡುವಂತೆ ಕೋರಿ, ಮನವಿ ಅರ್ಜಿಯನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಸಲ್ಲಿಸತಕ್ಕದ್ದು.

(ಆ) ಬೇರೆ ಬೇರೆ ರಾಜ್ಯಗಳಲ್ಲಿ ಮಾನ್ಯತೆ ಪಡೆದ ಒಂದಕ್ಕಿಂತ ಹೆಚ್ಚು ಪಕ್ಷಗಳು, ಒಂದೇ ಚಿಹ್ನೆಯನ್ನು ತಮ್ಮ ಪಕ್ಷದ ಮೀಸಲು ಚಿಹ್ನೆಯನ್ನಾಗಿ ಪಡೆದುಕೊಂಡಿದ್ದಲ್ಲಿ, ಅಂತಹ ಪಕ್ಷಗಳು ತಮ್ಮ ಪಕ್ಷದ/ಪಕ್ಷಗಳ ಅಭ್ಯರ್ಥಿಗಳಿಗೆ ಅದೇ ಚಿಹ್ನೆಯನ್ನು ನೀಡಲು ಕೋರಿ ಮನವಿ ಅರ್ಜಿ ಸಲ್ಲಿಸಿದಲ್ಲಿ, ರಾಜ್ಯ ಚುನಾವಣಾ ಆಯೋಗವು ಚೀಟಿ ಎತ್ತುವ ಮೂಲಕ ಚಿಹ್ನೆಯನ್ನು ಅಂತಹ ಪಕ್ಷದ ಅಭ್ಯರ್ಥಿಗಳಿಗೆ ಹಂಚಿಕೆ ಮಾಡಿ ಆದೇಶಿಸತಕ್ಕದ್ದು. ಉಳಿದ ಇತರೆ ಪಕ್ಷ/ಪಕ್ಷಗಳ ಅಭ್ಯರ್ಥಿಗಳು ಮುಕ್ತ ಚಿಹ್ನೆಯಲ್ಲಿನ ಯಾವುದಾದರೂ ಒಂದು ಚಿಹ್ನೆಯನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು.

(ಇ) ಯಾವ ಪಕ್ಷವು ತನ್ನನ್ನು ಅಭ್ಯರ್ಥಿಯನ್ನಾಗಿ ನಿಲ್ಲಿಸಿದೆ ಎಂಬುದನ್ನು ನಾಮಪತ್ರದಲ್ಲಿ ಅಭ್ಯರ್ಥಿಯು ಘೋಷಣೆ ಮಾಡತಕ್ಕದ್ದು. ಅಂದರೆ, ಅದಕ್ಕೆ ವ್ಯತಿರಿಕ್ತವಾಗುವಂತಹ ಗಮನಾರ್ಹ ಅಂಶಗಳು ನಾಮಪತ್ರದಲ್ಲಾಗಲೀ ಅಥವಾ ನಮೂನೆ "ಸಿ" ಅಥವಾ "ಡಿ" ಯಲ್ಲಿ ಕಂಡುಬಂದಲ್ಲಿ, ಅಂತಹ ಅಭ್ಯರ್ಥಿಗೆ ಕಾಯ್ದಿರಿಸಿದ ಚಿಹ್ನೆ ನೀಡಲಾಗುವುದಿಲ್ಲ ಮತ್ತು ಅಂತಹ ಅಭ್ಯರ್ಥಿಗಳಿಗೆ ಮುಕ್ತ ಚಿಹ್ನೆಗಳ ಪಟ್ಟಿಯಿಂದ ಚುನಾವಣಾಧಿಕಾರಿಯು ಚಿಹ್ನೆಯನ್ನು ಹಂಚಿಕೆ ಮಾಡತಕ್ಕದ್ದು.

(ಈ) ಅರ್ಜಿಯನ್ನು ತಿರಸ್ಕರಿಸಲು ಯಾವುದೇ ಸಮಂಜಸವಾದ ಕಾರಣಗಳು ಇಲ್ಲವೆಂದು ರಾಜ್ಯ ಚುನಾವಣೆ ಆಯೋಗ ಮನವರಿಕೆ ಮಾಡಿಕೊಳ್ಳತಕ್ಕದ್ದು, ಆದರೆ ಹಂಚಿಕೆ ಮಾಡಲಾದ ಚಿಹ್ನೆಯನ್ನೇ ಮುಂದೆ ನಡೆಯುವ ಯಾವುದೇ ಇತರೆ ಚುನಾವಣೆಗೆ ನೀಡುವಂತೆ ಹಕ್ಕು ಪ್ರತಿಪಾದಿಸುವಂತಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಂ.ಬಿ. ಧೋತ್ರೆ**
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ8) 1000 ಪ್ರತಿಗಳು)